6. ವಿಷಯ: ಉಡುಪಿಯಲ್ಲಿ ಆಟೋರಿಕ್ಷಾ ಮೀಟರ್‌ನ ದರವನ್ನು 1 ರೂಪಾಯಿ ಏರಿಸುವ ಬಗ್ಗೆ.

ಶ್ರೀ ವಿ. ಸುನೀಲ್‌ಕುಮಾರ್ (ಕಾರ್ಕಳ):– ಮಾನ್ಯ ಅಧ್ಯಕ್ಷರೆ, ಉಡುಪಿ ಜಿಲ್ಲೆಯಲ್ಲಿರುವಂಥ ಆಟೋರಿಕ್ಷಾಗಳ ಮೀಟರ್‌ಗಳಲ್ಲಿ ದರವನ್ನು 1 ರೂಪಾಯಿ ಜಾಸ್ತಿ ಮಾಡಬೇಕೆಂದು ಮೊನ್ನೆ ಆಟೋರಿಕ್ಷಾದವರೆಲ್ಲರೂ ಪ್ರತಿಭಟನೆ ಮಾಡಿ ಜಿಲ್ಲಾಧಿಕಾರಿಗಳಿಗೆ ಮನವಿ ಕೊಟ್ಟಿದ್ದಾರೆ. ಬಳಕೆದಾರರ ವೇದಿಕೆಯವರು, ಸಾರ್ವಜನಿಕರು ಇದಕ್ಕೆ ಸಹಮತಿಯನ್ನು ಸೂಚಿಸಿದ್ದಾರೆ. ಜಿಲ್ಲಾಧಿಕಾರಿಗಳು ಇನ್ನು ಆರ್.ಟಿ.ಓ. ರವರನ್ನು ಮೀಟಿಂಗ್‌ಗೆ ಕರೆಯದೇ ಇರುವ ಕಾರಣಕ್ಕೆ ವಿಳಂಬವಾಗಿದೆಯೆಂದು 03 ನೇ ತಾರೀಖು ಆಟೋ ಚಾಲಕರೆಲ್ಲರೂ ಉಡುಪಿ ಬಂದ್‌ಗೆ ಕರೆ ಕೊಡುತ್ತಿದ್ದಾರೆ. ದಯಮಾಡಿ 1 ರೂಪಾಯಿ ದರವನ್ನು ಹೆಚ್ಚಿಸುವುದಕ್ಕೆ ಎಲ್ಲರ ಸಮ್ಮತಿ ಕೂಡ ಇರುವುದರಿಂದ ಜಿಲ್ಲಾಧಿಕಾರಿಗಳಿಗೆ ತಕ್ಷಣ ಸೂಚನೆ ಕೊಟ್ಟು 1 ರೂಪಾಯಿ ದರವನ್ನು ಏರಿಸುವುದಕ್ಕೆ ಅಗತ್ಯ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಸಾರಿಗೆ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಉಡುಪಿಯಲ್ಲಿ ಆಟೋರಿಕ್ಷಾ ಮೀಟರ್‌ನಲ್ಲಿ ದರವನ್ನು ಹೆಚ್ಚಿಸುವುದರ ಬಗ್ಗೆ ಮಾನ್ಯ ಸದಸ್ಯರು ಮಾನ್ಯ ಸಾರಿಗೆ ಸಚಿವರ ಗಮನವನ್ನು ಸೆಳೆದಿದ್ದಾರೆ. ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ಸೂಚನೆ ಕೊಡಬೇಕೆನ್ನುವ ಮನವಿಯನ್ನು ಕೂಡ ಮಾಡಿದ್ದಾರೆ. ಈ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತಂದು ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡುವುದಕ್ಕೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ.